ಪತ್ರಿಕಾ ಪ್ರಕಟಣೆ : 20ನೇ ಮಾರ್ಚ್ 2015 : ಬೆಂಗಳೂರು

***ಕರ್ನಾಟಕದ ಗೌರವಾನ್ವಿತ ಉಚ್ಛ ನ್ಯಾಯಾಲಯದ ನಿರ್ದೇಶನಗಳ ದಟ್ಟ ಉಲ್ಲಂಘನೆಗಳಿಂದಾಗಿ ಮತ್ತೊಮ್ಮೆ ಮಾವಳ್ಳಿಪುರದಲ್ಲಿ ಅವ್ಯವಸ್ಥೆ***

**<u>ಹಿನ್ನೆಲೆ:</u>**

ಘನತ್ಯಾಜ್ಯ ನಿರ್ವಾಹಕರಾದ ಮೆ। ರಾಮ್ಕಿ ಸಂಸ್ಥೆಯವರು ಮಾಲಿನ್ಯ ನಿಯಂತ್ರಣ ನಿಯಮಗಳನ್ನು ಪಾಲಿಸಿದ ಕಾರಣದಿಂದಾಗಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶಗಳ ಮೇರೆಗೆ 2012ರ ಆಗಸ್ಟ್‌ನಲ್ಲಿ ಮಾವಳ್ಳಿಲಪುರದ ಘನ್ಯತ್ಯಾಜ್ಯ ನಿರ್ವಹಣಾ ಸ್ಥಳವನ್ನು ಮುಚ್ಚಲಾಗಿತ್ತು. ಇದು ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸಿಸುವ ಜನರ ಆರೋಗ್ಯ ಹಾಗೂ ಪರಿಸರಕ್ಕೆ ಅಪಾರ ಹಾನಿಗೂ ಕಾರಣವಗಿತ್ತು. ಆದರೂ ಒಂದಲ್ಲ ಒಂದು ಕಾರಣ ನೀಡಿ ಬಿಬಿಎಂಪಿಯು ಈ ಘನತ್ಯಾಜ್ಯ ನಿರ್ವಹಣಾ ಸ್ಥಳಗಳನ್ನು ಪುನಃ ಆರಂಭಿಸಲು ನಿರಂತರ ಪ್ರಯತ್ನಗಳನ್ನು ನಡೆಸಿದೆ. ಈ ಸಂಬಂಧ ವಿವಿಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಗೆ ಪ್ರತಿಕ್ರಿಯಿಸಿರುವ ಗೌರವಾನ್ವಿತ ಕರ್ನಾಟಕದ ಉಚ್ಛ ನ್ಯಾಯಲಯವು, ಬೆಂಗಳೂರು ನಗರದ ಸುತ್ತಮುತ್ತಲಿನ ಸಾಧಾರಣ ಭೂಮಿ, ಅರಣ್ಯ ಪ್ರದೇಶಗಳು ಹಾಗೂ ಗ್ರಾಮಗಳಲ್ಲಿನ ಕೆರೆಗಳು ತ್ಯಾಜ್ಯ ನಿರ್ವಹಣೆಗೆ ಪರಿಹಾರವಲ್ಲ ಎಂದು ತಿಳಿಸಿದೆ. (ಉಚ್ಛ ನ್ಯಾಯಾಲಯದ ಆದೇಶಗಳನ್ನು ವೆಬ್‌ಸೈಟ್: http://tinyurl.com/l88havp ನಲ್ಲಿ ನೋಡಬಹುದು.)

ಬೆಂಗಳೂರಿನಲ್ಲಿ ತ್ಯಾಜ್ಯ ನಿರ್ವಹಣೆ ಸಮಸ್ಯೆಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ನ್ಯಾಯಾಲಯದ ಆವರ್ತನ, ನಿರ್ಧಿಷ್ಟ ಹಾಗೂ ಸಮಗ್ರ ಆದೇಶಗಳು, ಸಾರ್ವಜನಿಕ ಆರೋಗ್ಯಕ್ಕೆ ಅಪಾಯವನ್ನು ಉಂಟು ಮಾಡಿರುವಂತಹ ಪರಿಸರ-ಸ್ನೇಹಿ ತಂತ್ರಜ್ಞಾನಗಳೊಂದಿಗೆ, ತ್ಯಾಜ್ಯ ಬೇರ್ಪಡಿಸುವಿಕೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಗತಿಪರ ಕಾರ್ಯತಂತ್ರವನ್ನು ಕೈಗೊಳ್ಳಲು ನೆರವಾಗಿದೆ. ಗೌರವಾನ್ವಿತ ನ್ಯಾಯಾಲಯವು, ಬೆಂಗಳೂರಿನ ತ್ಯಾಜ್ಯ ಸಮಸ್ಯೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಅತ್ಯಂತ ಸೂಕ್ಷ್ಮ ವಿವರಗಳನ್ನೂ ಗಮನಿಸಿದೆ ಹಾಗೂ ಬೃಹತ್ ಪ್ರಮಾಣದ ತ್ಯಾಜ್ಯ ಸೃಷ್ಟಿಸುವಂತಹ ಸ್ಥಳಗಳು (ಕಲ್ಯಾಣ ಮಂಟಪಗಳು, ಅಪಾರ್ಟ್‌ಮೆಂಟ್‌ಗಳು, ಸಂಸ್ಥೆಗಳೂ, ಕಛೇರಿ ಬ್ಲಾಕ್‌ಗಳು, ಬಸ್/ರೈಲ್ವೆ ನಿಲ್ದಾಣಗಳು, ಮಾರುಕಟ್ಟೆಗಳು, ಮಾಲ್‌ಗಳು, ಇತ್ಯಾದಿ) ತಾವು ಸೃಷ್ಟಿಸುವ ತ್ಯಾಜ್ಯಕ್ಕೆ ತಾವೇ ಜವಾಬ್ದಾರರು. ಇದರ ನಿರ್ವಹಣೆ ಹಾಗೂ ಬೇರ್ಪಡಿಸುವಿಕೆಗೆ, ಗೊಬ್ಬರ/ಜೈವಿಕ-ಮೆಥನೇಟ್ ಸಾವಯವ ತ್ಯಾಜ್ಯ, ಮುಂದಿನ ಸಂಸ್ಕರಣೆಗೆ ಅಗ್ಯವಿರುವಂತಹ ಎಲ್ಲಾ ಮರುಬಳಕೆ ಮಾಡಬಹುದಾದ ವಸ್ತುಗಳಿಗೆ ಸಂಬಂಧಿಸಿದಂತೆ ಸ್ಥಳೀಯವಾಗಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವಂತೆ ಹಾಗೂ ತ್ಯಾಜ್ಯ ಸೃಷ್ಟಿಯನ್ನು ಸಾಧ್ಯವಾದಷ್ಟೂ ಕಡಿಮೆಗೊಳಿಸುವಂತೆ ಸೂಚಿಸಿದೆ. ಗೃಹೋಪಯೋಗಿ ಹಾಗೂ ನೆರೆಯ ಬಡಾವಣೆಗಳಿಗಾಗಿ, ಒಣ ತ್ಯಾಜ್ಯ ಸಂಗ್ರಹಿಸುವ ಕೇಂದ್ರಗಳನ್ನು ಹಾಗೂ ಗೊಬ್ಬರ ತಯಾರಿಕಾ ಘಟಕಗಳನ್ನು ಸ್ಥಾಪಿಸುವಂತೆ ಗೌರವಾನ್ವಿತ ನ್ಯಾಯಾಲಯ ನಿರ್ದೇಶನ ನೀಡಿದೆ ಹಾಗೂ ಎಲ್ಲಾ ತ್ಯಾಜ್ಯವೂ ಸ್ಥಳೀಯವಾಗಿಯೇ ನಿರ್ವಹಣೆಯಾಗುವಂತೆ ಹಾಗೂ ಲಾರಿಗಳಲ್ಲಿ ತುಂಬಿಸಿ ಘನತ್ಯಾಜ್ಯ ನಿರ್ವಹಣಾ ಸ್ಥಳಗಳಿಗೆ ಕಳುಹಿಸಿ, ಗ್ರಾಮಗಳನ್ನು ನಾಶಪಡಿಸದಿರುವಂತೆ ಖಾತ್ರಿಪಡಿಸಲು ಸೂಚಿಸಿದೆ. ಈ ಮೂಲಕ ಅಪಾರ ಪ್ರಮಾಣದ ಡೀಸೆಲ್ ಬಳಕೆ ಹಾಗೂ ಅದರಿಂದ ತಗಲುವ ಅಪಾರ ಪ್ರಮಾಣದ ವೆಚ್ಚಗಳಿಗೂ ಕಡಿವಾಣ ಹಾಕಬಹುದು. ಅಮೂಲ್ಯವಾದ ಸಂಪನ್ಮೂಲಗಳ ವ್ಯರ್ಥಕ್ಕೆ ಕಾರಣವಾಗುತ್ತಿದ್ದಂತಹ ಟ್ರಕ್ ಲಾಬಿಯ ಮೇಲೂ ಸಹ ನ್ಯಾಯಾಲಯ ಕಟ್ಟುನಿಟ್ಟಾದ ಕ್ರಮವನ್ನು ಕೈಗೊಂಡಿದೆ ಹಾಗೂ ಈ ಮೂಲಕ ಲಾರಿಗಳ ಮೂಲಕ ತ್ಯಾಜ್ಯವನ್ನು ಸಾಗಿಸಲು ತಗಲುತ್ತಿದ್ದ ರೂ.800 ಕೋಟಿಗಳಷ್ಟು ವೆಚ್ಚಗಳನ್ನು ರೂ.300 ಕೋಟಿಗಳಿಗೆ ಇಳಿಸಿದೆ.

ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಎನ್. ಕುಮಾರ್ ಹಾಗೂ ಜಸ್ಟೀಸ್ ಬಿ.ವಿ. ನಾಗರತ್ನ ಅವರು ಪರಿಸ್ಥಿತಿಯನ್ನು ಕ್ರಮಬದ್ಧವಾಗಿ ನಿಗಾವಹಿಸುತ್ತಿದ್ದಾರೆ ಹಾಗೂ ಈ ನಿಯಮಗಳನ್ನು ಪಾಲಿಸದಿರುವಂತಹ ಯಾವುದೇ ವ್ಯಕ್ತಿಯ ವಿರುದ್ಧ ಕ್ರಮಗಳನ್ನು ಕೈಗೊಳ್ಳುಂತೆ ಸೂಚಿಸಿದ್ದಾರೆ. ತ್ಯಾಜ್ಯ ನಿರ್ವಹಣೆ ಕಾರ್ಯಾಚರಣೆಗಳಿಗೆ ಸಂಬಂಧಪಟ್ಟಂತೆ ದೊಡ್ಡ ಸಾರ್ವಜನಿಕ ಭಾಗವಹಿಸುವಿಕೆ ಹಾಗೂ ಪಾರದರ್ಶಕತೆಯನ್ನು ಖಾತ್ರಿಪಡಿಸಲು, ಸಾಂವಿಧಾನಿಕವಾಗಿ ಕಡ್ಡಾಯಗೊಳಿಸುವಂತಹ ವಾರ್ಡ್ ಸಮಿತಿಗಳನ್ನು ಸ್ಥಾಪಿಸುವಂತೆ ಗೌರವಾನ್ವಿತ ನ್ಯಾಯಾಲಯವು, ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಈ ಪ್ರಕಾರ ಸರ್ಕಾರ ಈ ಸಮಿತಿಗಳನ್ನು ಎರಡು ದಶಕಗಳ ಹಿಂದೆಯೇ ರಚಿಸಬೇಕಾಗಿತ್ತು. ಬಿಬಿಎಂಪಿ, ಪೌರಕಾರ್ಮಿಕರಿಗೆ (ಬಡವರಲ್ಲಿ ಬಡವರಾಗಿರುವಂತಹ ಸಮುದಾಯ) 6 ತಿಂಗಳಿಂದ ವೇತನ ನೀಡಿಲ್ಲ ಎಂಬ ವಿಷಯವನ್ನು ಅರಿತ ನ್ಯಾಯಾಲಯ, ಬಿಬಿಎಂಪಿಗೆ ಈ ರೀತಿ ಆದೇಶಿಸಿದೆ: "ಘನ ತ್ಯಾಜ್ಯ ನಿರ್ವಹಣೆಗೆ ಸಂಬಂದಿಸಿದಂತೆ, ಅವರು ಸಲ್ಲಿಸಿರುವ ಬಿಲ್ಲುಗಳನ್ನು ಸಂಪೂರ್ಣವಾಗಿ ಹಾಗೂ ಶೀಘ್ರವಾಗಿ ಭರಿಸುವವರೆಗೂ ಅವರಿಗೆ ಕೆಲಸಗಳನ್ನು ನಿರ್ವಹಿಸುವಂತೆ ಹೇಳುವ ನೈತಿಕ ಅಧಿಕಾರ ವಿಶೇಷ ಆಯುಕ್ತರಿಗೆ ಇರುವುದಿಲ್ಲ," ಎಂದಿದೆ. ಇದರಿಂದಾಗಿ 2015ರ ಮಾರ್ಚ್‌ನಲ್ಲಿ ಬಿಬಿಎಂಪಿ ಬಾಕಿ ಪಾವತಿಗಳಿಗೆ ರೂ.120 ಕೋಟಿಗಳನ್ನು ಬಿಡುಗಡೆ ಮಾಡಿತು.

ಮಾವಳ್ಳಿಪುರದಲ್ಲಿ ಕಳಪೆ ನಿರ್ವಹಣೆ:

ಮಾವಳ್ಳಿಪುರ ಪ್ರಕರಣದಲ್ಲಿ ನ್ಯಾಯಾಲಯವು, ಇನ್ನು ಮುಂದೆ ಇಲ್ಲಿ ಯಾವುದೇ ಘನತ್ಯಾಜ್ಯ ನಿರ್ವಹಣೆ ಸಂಸ್ಕರಣೆಗೆ ಸ್ಥಳವನ್ನು ಬಳಸುವಂತಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಿದೆ. ಬಯೋ-ಮೈನಿಂಗ್ ಹಾಗೂ ತ್ಯಾಜ್ಯದ ರೀಮೀಡಿಯೇಷನ್ ಕ್ರಮಗಳನ್ನು ಕೈಗೊಳ್ಳುವಂತೆ ನ್ಯಾಯಾಲಯ ಬಿಬಿಎಂಪಿಗೆ ಸೂಚಿಸಿದೆ, ಈ ನಿಟ್ಟಿನಲ್ಲಿ ಬಿಬಿಎಂಪಿ ಟೆಂಡರ್‌ಗಳನ್ನು ವಿತರಿಸಿರುವುದಾಗಿ ನ್ಯಾಯಾಲಯಕ್ಕೆ ತಿಳಿಸಿದೆ. ಇದು ಆರು ತಿಂಗಳ ಹಿಂದಿನ ಮಾತು. ಆದರೆ ಈವರೆಗೂ ಲೆಜಸಿ ತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ಯಾವುದೇ ಪೂರಕ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. 2014ರ ಡಿಸೆಂಬರ್ 1ರಂದು ಕರ್ನಾಟಕದ ಮುಖ್ಯಮಂತ್ರಿಗಳು ಮಂಡೂರಿನಲ್ಲಿರುವ ಲ್ಯಾಂಡ್‌ಫಿಲ್ (ಘನ ತ್ಯಾಜ್ಯ ನಿರ್ವಹಣಾ ಸ್ಥಳ) ಮುಚ್ಚಲು ನಿರ್ಧರಿಸಿದಾಗ,

ನಗರದಾದ್ಯಂತ ತ್ಯಾಜ್ಯ ತುಂಬಿಹೋಗಿತ್ತು. ಹಾಗಾಗಿ ಕೇವಲ ಸಣ್ಣ ಪ್ರಮಾಣದ ಬೇರ್ಪಡಿಸಿರುವ ಸಾವಯವ ತ್ಯಾಜ್ಯವನ್ನು ಮಾತ್ರ ಮಾವಳ್ಳಿಪುರಕ್ಕೆ ಗೊಬ್ಬರ ತಯಾರಿಕೆಗೆ ತೆಗೆದುಕೊಂಡು ಹೋಲು ಅನುಮತಿ ನೀಡಿತ್ತು ಮತ್ತು ಎಲ್ಲಾ ಎಚ್ಚರಿಕಾ ಕ್ರಮಗಳನ್ನು ತಪ್ಪದೇ ಖಾತ್ರಿಪಡಿಸುವಂತೆಯೂ ಸೂಚಿಸಿತ್ತು. ಈ ರೀತಿ ತ್ಯಾಜ್ಯ ನಿರ್ವಹಣಾ ಸ್ಥಳಗಳಲ್ಲಿ ಪಕ್ಷಿಗಳ ಕಾಟ ಹೆಚ್ಚಾಗಿದ್ದು, ಇದರಿಂದಾಗಿ ವಿಮಾನಯಾನಕ್ಕೆ ತೊಂದರೆಯಾಗುತ್ತಿರುವುದನ್ನು ಯಲಂಕಾ ಏರ್ ಫೋರ್ಸ್ ಕಾಳಜಿ ವ್ಯಕ್ತಪಡಿಸಿತು ಹಾಗೂ ಈ ಹಿನ್ನೆಲೆಯಲ್ಲಿ ಇಡೀ ಸೌಲಭ್ಯಕ್ಕೆ ಛಾವಣಿ ಹಾಕುವಂತೆ ಹಾಗೂ ಪಕ್ಷಿಗಳು ಬರದಿರುವಂತೆ ಕ್ರಮಗಳನ್ನು ಕೈಗೊರ್ಳಳುವಂತೆ ಬಿಬಿಎಂಪಿಗೆ ಸೂಚಿಸಲಾಯಿತು. ಜೊತೆಗೆ, ತೊಂದರೆಗೀಡಾಗಿರುವ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ, ಆರೋಗ್ಯ ರಕ್ಷಣೆ ಸಮೀಕೆಗಳನ್ನು ಕೈಗೊಳ್ಳುವಂತೆ, ಹಾಗೂ ಜಾನುವಾರ ಸಮೀಕ್ಷೆಗಳನ್ನು ಕೈಗೊಳ್ಳುವಂತೆ ಹಾಗೂ ದುಷ್ಪರಿಣಾಮಗಳನ್ನು ತಪ್ಪಿಸಲು 5 ಪಂಚಾಯಿತಿ ವ್ಯಾಪ್ತಿಗಳಲ್ಲಿ ವಿವಿಧ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ಕೈಗೊಳ್ಳುವಂತೆಯೂ ನ್ಯಾಯಾಲಯ ಬಿಬಿಎಂಪಿಗೆ ಸೂಚನೆಗಳನ್ನು ನೀಡಿತು.

ಆದರೆ ಬಿಬಿಎಂಪಿಯು ಪುನಃ ಬೇರ್ಪಡಿಸದಿರುವಂತಹ ತ್ಯಾಜ್ಯವನ್ನು ತಂದು ಸುರಿಯುವುದನ್ನು ಮುಂದುವರೆಸಿದೆ, ಅದೂ ಸಹ ಪ್ರತಿ ದಿನ 200 ಟನ್‌ಗಳವರೆಗೂ. ಜೊತೆಗೆ ಈ ತ್ಯಾಜ್ಯವನ್ನು ಸಂಸ್ಕರಿಸಲು ಸೂಕ್ತ ಚಿಕಿತ್ಸಾ ಘಟಕವೂ ಸಹ ಇಅಲ್ಲ ಹಾಗಾಗಿ ಇದು ಸ್ಥಳೀಯ ತೊರೆಗಳು ಹಾಗೂ ಕೆರೆಗಳ ಕಡೆ ಹೋಗುತ್ತಿದೆ. ಜಾನುವಾರುಗಳ ಸಾವು ಹೆಚ್ಚಾಗುತ್ತಿದ್ದು, ಸ್ಥಳೀಯ ಗ್ರಾಮಸ್ಥರು ಮಾಲಿನ್ಯದಿಂದ ಅನಾರೋಗ್ಯದ ಸಮಸ್ಯೆಗಳನ್ನು ಎದುರಿಸುವ ಸಂಗತಿಗಳು ಮುಂದುವರೆದಿದೆ. ಈ ಘನತ್ಯಾಜ್ಯ ಸುರಿಯುವ ಸ್ಥಳಗಳಲ್ಲಿ ಸಾವಿರಾರು ಪಕ್ಷಿಗಳು ಹಾರಾಡುತ್ತವೆ. ಇದು ಭಾರತೀಯ ವಾಯು ಸೇನೆಯ ವಿಮಾನಗಳ ಹಾರಾಟಕ್ಕೆ ಅತ್ಯಂತ ಅಪಾಯವನ್ನು ಸೂಸಿಸುತ್ತದೆ.

**ಬಿಬಿಎಂಪಿ ವಿಶೇಷ ಆಯುಕ್ತರ ಜೊತೆ ಮಾತುಕತೆ ವಿಫಲ:**
ಉಚ್ಚ ನ್ಯಾಯಾಲಯದ ನಿರ್ದೇಶನಗಳಂತೆ, 2015ರ ಮಾರ್ಚ್ 18ರಂದು ಬಿಬಿಎಂಪಿಯ ವಿಶೇಷ ಆಯುಕ್ತರಾದ (ಎಸ್‌ಡಬ್ಲ್ಯೂಎಂ) ಶ್ರೀ ದರ್ಪಣ್ ಜೈನ್, ಭಾ.ಆ.ಸೇ. ಅವರು ತೊಂದರೆಗೀಡಾ ಗ್ರಾಮಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು. ಆದರೆ ಈ ಸಭೆ ಯಾವುದೇ ನಿರ್ಣಯಗಳನ್ನು ಸಾಧ್ಯವಾಗದೆ ಕೊನೆಗೊಂಡಿತು. ಬಿಬಿಎಂಪಿಯು ಯಾವುದೇ ಸೂಕ್ತ ಸಮಯಾಧಾರಿತ ಕ್ರಿಯಾ ಯೋಜನೆಗೆ ಬದ್ಧತೆಯನ್ನು ಹೊಂದಿಲ್ಲದಿರುವುದೇ ಇದಕ್ಕೆ ಕಾರಣ. ಈ ಪ್ರಕಾರ ಬಿಬಿಎಂಪಿ ನ್ಯಾಯಾಲಯದ ಮುಂದೆ ವ್ಯಕ್ತಪಡಿಸಿದ ತನ್ನ ಬದ್ಧತೆಗಳನ್ನು ಉಲ್ಲಂಘಿಸಿದಂತಾಗಿದೆ.

ಪರಿಸರ ಬೆಂಬಲ ಗುಂಪಿನ ಶ್ರೀ ಭಾರ್ಗವಿ ರಾವ್ ಅವರು, ಬಿಬಿಎಂಪಿಯ ವಿಶೇಷ ಆಯುಕ್ತರಿಗೆ ಮಾವಳ್ಳಿಪುರವನ್ನು ಸ್ವಚ್ಛಗೊಳಸುವುದು ಹಾಗೂ ಸ್ಥಳೀಯ ಸಮುದಾಯಗಳಿಗೆ ಪರಿಹಾರ ಒದಗಿಸುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ವಿವಿಧ ನಿರ್ದೇಶನಗಳನ್ನು ವಿವರಿಸಿದಾಗ, ಶ್ರೀ ಜೈನ್ ಅವರು, "ನಾವು ಈ ನಿರ್ದೇಶನಗಳನ್ನು ಪಾಲಿಸಲು ಪ್ರಯತ್ನಿಸುತ್ತಿದ್ದೇವೆ," ಎಂದು ಉತ್ತರಿಸಿದರು. ಆದರೆ ಅವರು ಮಾತುಗಳು ತೃಪ್ತಕರವಾಗಿಲ್ಲ ಎಂದು ಭಾರ್ಗವಿ ಅವರು ಉತ್ತರಿಸಿದರು. ಗ್ರಾಮ ಪಂಚಾಯಿತಿ ಸದಸ್ಯ ಹಾಗೂ ದಲಿತ ಸಂಘರ್ಷ ಸಮಿತಿಯ ಸದಸ್ಯರಾಗಿರುವ ಶ್ರೀನಿವಾಸ್ ಅವರು ಮಾತನಾಡಿ, "ಬಿಬಿಎಂಪಿಯು ನ್ಯಾಯಾಲಯದ ಒಂದೇ ಒಂದೂ ನಿರ್ದೇಶನಗಳನ್ನೂ ಸಹ ಪಾಲಿಸುತ್ತಿಲ್ಲ ಎಂದು ವಿವರಿಸಿದರು.



**"ಗಾರ್ಬೇಜ್ ಗುಮ್ಮ":-**

ಮಾವಳ್ಳಿಪುರ ಮತ್ತು ಸುತ್ತಮುತ್ತಲಿನ ಇತರೆ ಗ್ರಾಮಗಳ ಜನರು ಮತ್ತು ಸಮುದಾಯದವರು ಎದುರಿಸುತ್ತಿರುವ ವಿವಿಧ ಹಂತದ ಸಮಸ್ಯೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿರುತ್ತಾರೆ. ಬೆಂಗಳೂರು ಮಹಾನಗರ ಪಾಲಿಕೆಯಿಂದ ನಮ್ಮ ಹಳ್ಳಿಗರು ಜೀವಿಸುವ ಹಕ್ಕು ಮತ್ತು ಜೀವನೋಪಾಯವು ಕಷ್ಟಕರವಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಬೆಂಗಳೂರು ನಿವಾಸಿಗಳು ಉಚ್ಚ

ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ಮತ್ತು ಪ್ರಜ್ಞೆ ಮೂಡಿಸಲು ಮತ್ತು ಅಕ್ಷರಶಃ ಕೊಂದು ಹಳ್ಳಿಗಳ ಜನರನ್ನು ಕುಂಠಿತಗೊಳಿಸುತ್ತಿದ್ದಾರೆ. ಇವರ ತ್ಯಾಜ್ಯ ದಿಂದ ಅವರ ಜೀವನೋಪಾಯಕ್ಕೆ ಮತ್ತು ಆರೋಗ್ಯ ನಾಶಮಾಡಿರುವುದರ ಬಗ್ಗೆ ಹೆಸರಾಮತ ಕವಿ ಮತ್ತು ಸಾಹಿತಿ ಗೊಲ್ಲಹಳ್ಳಿ ಶಿವಪ್ರಸಾದ್ ನಿರ್ಮಿಸಿರುವ "ಗಾರ್ಬೇಜ್ ಗುಮ್ಮ" ಧ್ವನಿ ಸುರುಳಿಯನ್ನು ಹೊರತಂದಿರುತ್ತಾರೆ. ಶಿವಪ್ರಸಾದ್ ಮತ್ತು ಅವರ ತಂಡದ ರಾಗಕ್ಕೆ ಹೊಂದಿಸಿ ಈ ಹಾಡುಗಳನ್ನು ಎಲ್ಲಾ ಆನ್‌ಲೈನ್‌ನಲ್ಲಿ ಉಚಿತವಾಗಿ ಲಭ್ಯವಾಗುವಂತೆ ಮಾಡಲಾಗುತ್ತದೆ.

ನಾಗರಾಜ್, ಶ್ರೀನಿವಾಸ ಬಿ, ಮತ್ತು ರಮೇಶ್
ದಲಿತ ಸಂಘರ್ಷ ಸಮಿತಿ ಮತ್ತು ಮಾವಳ್ಳಿಪುರ ಸುತ್ತಮುತ್ತಲಿನ
ತ್ಯಾಜ್ಯ ನಿರ್ವಹಣಾ ಗ್ರಾಮಗಳು.

ಭಾರ್ಗವಿ ಎಸ್ ರಾವ್ ಮತ್ತು ಲಿಯೋ ಸಲ್ಡಾನ
ಪರಿಸರ ಬೆಂಬಲ ತಂಡ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಶ್ರೀನಿವಾಸ ( 9448174834, hari1975@gmail.com)
ರಮೇಶ್ (9740152184)

ಪರಿಸರ ಬೆಂಬಲ ತಂಡ, 1572, 100 ಅಡಿ ವರ್ತುಲ ರಸ್ತೆ, ಬನಶಂಕರಿ
2ನೇ ಹಂತ, ಬೆಂಗಳೂರು – 560070.
ದೂರವಾಣಿ: 080 – 26713559 / 60
Email: esg@esgindia.org Web: www.esgindia.org